# 'ಚ' 'ಜ'  ಅಕ್ಷರದ ವಚನದ ಅರ್ಥ

1).ಚಂದನವ ಕಡಿದು ಕೊರೆದು ತೇದಡೆ ನೊಂದೆನೆಂದು ಕಂಪಬಿಟ್ಟಿತ್ತೆ .
ತಂದು ಸುವರ್ಣವ ಕಡಿದು ಒರೆದಡೆ ಬೆಂದು ಕಳಂಕ ಹಿಡಿದಿತ್ತೆ.
ಸಂದುಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕಿಅರೆದೊಡೆ ಬೆಂದು
ಪಾಕಗೊಳೆ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ನಿಮ್ಮ ಮುಂದಿಳುಹಲು
ನಿಮಗೆ ಹಾನಿ ಚೆನ್ನಮಲ್ಲಿಕಾರ್ಜುನಯ್ಯ ಕೊಂದಡೆ ಶರಣೆಂಬುದ ಮಾಣೆ.

### ಪದಗಳ ಅರ್ಥ

ಕಳಂಕ-ದೋಷ,
ಅರೆ-ಹಿಂಡು,
ಹೀನ-ಪಾಪ,
ಹಾನಿ-ನಷ್ಟ
ಶರಣು-ಅರ್ಪಣೆ

### ವಚನದ ಅರ್ಥ

ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪಬಿಟ್ಟಿತೆ? ಚಂದನ ಎಂದರೆ ಗಂಧವನ್ನು ಎಷ್ಟೆ ತೇದರೂ ಪರಿಮಳವನ್ನೆ ಕೊಡುತ್ತದೆ. ತಂದು ಸುವರ್ಣವ ಕಡಿದು ಒರೆದಡೆ ಬೆಂದು ಕಳಂಕ ಹಿಡಿದಿತ್ತೆ? ಚಿನ್ನವನ್ನು ಬೆಂಕಿಯಲ್ಲಿ ಸುಟ್ಟರೂ ಕಬಿಣದಲ್ಲಿ ಬಡಿದರೂ, ತಿಕ್ಕಿದರೂ ಬಂಗಾರವರ್ಣವನ್ನೆ ಕೊಡುತ್ತದೆ. ಸಂದುಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಅರೆದೊಡೆ ಬೆಂದು ಪಾಕಗೊಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತೆ? ಕಬ್ಬನ್ನು ಗಿಣ್ಣು ಗಿಣ್ಣು ಗಿಣ್ಣಿಗೂ ಕತ್ತರಿಸಲಿ. ಗಾಣಕ್ಕೆ ಕೊಡಲಿ ಹಿಂಡಲಿ .ರಸವನ್ನು ಬೇಯಿಸಲಿ, ಕುದಿಸಲಿ,ಪಾಕ ಬರಿಸಲಿ

ಸಿಹಿಯನ್ನೆ ಕೊಡುತ್ತದೆ.ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ನಿಮ್ಮ ಮುಂದಿ ಮುಂದಿಹಲು ನಿಮಗೆ ಹಾನಿ ಕೊಂದಡೆ ಶರಣೆಂಬುದ ಮಾಣೆ. ನಾನು ಹಿಂದೆ ಏನೇನು ದೋಷಗಳನ್ನು ಮಾಡಿರುವೆನೊ ? ಅದನ್ನು ಇಲ್ಲಿ ತಂದಿಟ್ಟರೆ ನಿಮಗೆ ನಷ್ಟ. ನೀನು ಕೊಲ್ಲು ಕಾಯಿ ಶರಣು ಎನ್ನುವುದನ್ನು ಬಿಟ್ಟು ಬೇರೆ ಮಾತಿಲ್ಲ.

ವಚನ ಸರಳವಾಗಿದೆ ಮೂರು ದೃಷಾಂತಗಳಿವೆ. ಕಬ್ಬು ಚಿನ್ನ ಶ್ರೀಗಂಧ ಇವುಗಳಿಂದ ಸಕ್ಕರೆ, ಆಭರಣ,ಪರಿಮಳ ತೆಗೆಯಲಾಗುತ್ತದೆ. ಇವುಗಳನ್ನು ತೆಗೆಯಲು ಕಬ್ಬು ಚಿನ್ನ, ಚಂದನಗಳಿಗೆ ಸಾಕಷ್ಟು ಕಡಿದು ಒರೆಹಚ್ಚಿ ಏನೆಲ್ಲ ಕ್ರಿಯೆ ಮಾಡಲಾಗುತ್ತದೆ. ಆದರೆ ಅವು ಮಾತ್ರ ಎಲ್ಲವನ್ನು ಸಹಿಸಿ ಒಳ್ಳೆಯದನ್ನೆ

ಕೊಡುತ್ತವೆ. ಅವುಗಳಲ್ಲಿ ಗುಣಾತ್ಮಕವಾಗಿ ಶ್ರೇಷ್ಠತೆಯೆ ಇದೆ. ತೇದರೂ ಒರೆಹಚ್ಚಿದರೂ ಹಿಂಡಿದರೂ ಶ್ರೇಷ್ಠವಾದುದನ್ನೆ ಕೊಡುತ್ತವೆ. ಹಾಗೆ ಮನುಷ್ಯಳಾದ ನಾನೂ ಕೂಡ ಪರಮಾತ್ಮನೆ ಏನೆ ತೊಂದರೆ ಕೊಟ್ಟರು ನಾನು ನಿನ್ನಲ್ಲಿ ಶರಣಾಗಿದ್ದೇನೆ ಎಂಬುದನ್ನು ಬಿಟ್ಟು ಬೇರೆ ಮಾತಿಲ್ಲ. ಚಂದನ ಕಂಪನ್ನೆ ಕೊಡುತ್ತದೆ. ಚಿನ್ನ ಮಿನುಗುವ ಆಭರಣವನ್ನೆ ಕೊಡು ತ್ತದೆ. ಕಬ್ಬು ಸಿಹಿಯನ್ನೆ ಕೊಡುತ್ತದೆ. ಹಾಗೆ ಪರಮಾತ್ಮನೆ ಅನುಗ್ರಹಿಸು ಎಂದು ಮಾತ್ರ ಬೇಡುತ್ತೇನೆ. ಈ ವಚನದ ಶ್ರೇಷ್ಠತೆಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೆ.

2) ಚಂದ್ರಕಾಂತಶಿಲೆಗೆ ಗಜ ಬಂದು ಹೋರುವಂತೆ ತನ್ನ ನೆಳಲಿಂಗೆ ತಾನೆ ಹೋರಿ ಸಾವಂತೆ
ಆನೆಯ ಗತಿ, ಆನೆಯ ಮತಿ, ಆನೆಯಹುದು ಆನೆಯಲ್ಲ ಅದನೇನೆಂಬೆ? ನೀನೆನ್ನ ಕರಸ್ಥಲದಲ್ಲಿ ಸಿಕ್ಕಿದೆಯಾಗಿ ನೀನಾನೆಂಬ ಭ್ರಾಂತೇಕೆ? ನಾನು ನೀನಲ್ಲದೆ ತೆರಹಿಲ್ಲ ಚೆನ್ನಮಲ್ಲಿಕಾರ್ಜುನಾ.

### ಪದಗಳ ಅರ್ಥ

ಚಂದ್ರಕಾಂತ ಶಿಲೆ- ಪ್ರತಫಲಿಸುವ ಕನ್ನಡಿಯಂತಹ ಶಿಲೆ. ಪಾರದರ್ಶಕ ಶಿಲೆ . ಹೋರು-ಘೀಳಿಡು.

### ವಚನದ ಅರ್ಥ

ಇದು ಜ್ಞಾನೋದಯದ ಇನ್ನೊಂದು ವಚನ. ತಪಸ್ಸಿಗೆ ಬಂದು ತಲಸ್ಪರ್ಶಿ ದರ್ಶನ ಪಡೆದಿದ್ದಾರೆ. ಮನುಷ್ಯ ಸತ್ಯ ತಿಳಿಯದೆ ಏನೆಲ್ಲ ಗುದ್ದಾಟ ಮಾಡುವನೆಂಬುದನ್ನು ಆನೆಯ ರೂಪಕದ ಮೂಲಕ ಚಂದ ಚಿತ್ರಿಸಿದ್ದಾರೆ. ಇಲ್ಲಿ ಆನೆಯ ರೂಪಕ ಮನುಷ್ಯನ ಮಿಥ್ಯಾಕಲ್ಪನೆಗಳಿಗೆ ಕನ್ನಡಿ ಹಿಡಿಯುತ್ತದೆ. ಈಪ್ರತಿಮಾರೂಪಕ ಮನುಷ್ಯನ ಅಜ್ಞಾನಕ್ಕೆ ಅರ್ಥ ಹಚ್ಚಿದಷ್ಟೂ ವಿಸ್ತರಿಸುತ್ತ ಹೋಗುತ್ತದೆ.

ಚಂದ್ರಕಾಂತದ ಶಿಲೆಗೆ ಗಜ ಬಂದು ಹೋರುವಂತೆ. ಚಂದ್ರಕಾಂತಶಿಲೆಯಲ್ಲಿ ಕಾಣುವ ಬಿಂಬ ಆನೆಯದೆ . ಆದರೆ ಅದು ಬೇರೆ ಆನೆಯೆಂದು ಅದರ ಜೊತೆ ಕಾಳಗಕ್ಕಿಳಿಯುತ್ತದೆ. ಇದು ಹೇಗೆ ಎಂದರೆ ತನ್ನನೆಳಲಿಂಗೆ ತಾನೆ ಹೋರಿ ಸಾವಂತೆ . ಚಂದ್ರಕಾಂತ ಶಿಲೆಯಲ್ಲಿ ಕಾಣುವ ನೆಳಲು ತನ್ನ ನೆಳಲೆ ಆಗಿದ್ದರೂ ಅದು ಇನ್ನೊಂದು ಆ ಆನೆ ಎಂದು, ತಾನೆ ಗುದ್ದಾಡುವಂತೆ ಆಗಿದೆ. ಆನೆಯಗತಿ ಆನೆಯಮತಿ ಆನೆಯಹುದು ಆನೆಯಲ್ಲ ಅದನೇನೆಂಬೆ. ಆನೆಯಚಲನೆ ಆನೆಯ ಬುದ್ದಿ ಆನೆಯಹುದು ಆನೆಯಲ್ಲ. ಇದಕ್ಕೇನೆನ್ನಬೇಕು. ಚಂದ್ರಕಾಂತದ ಶಿಲೆಯ ಹೊರಗೆ ಘೀಳಿಡುವುದು ಆನೆ. ಕಾಣುವ ಬಿಂಬ ಆನೆ. ಬಿಂಬ ಆನೆ ಹೌದು .ದಿಟದ ಆನೆ ಅಲ್ಲ. ಆ ಹಾಗೆ ನನ್ನ ಕರಸ್ಥಲದಲ್ಲಿ ನೀನು ಸಿಕ್ಕಿರುವೆ.ಕರಸ್ಥಲದ ಇಷ್ಟಲಿಂಗ ದರ್ಪಣ, ಕನ್ನಡಿ. ಈಕನ್ನಡಿಯಲ್ಲಿ ಕಾಣುವುದು ನಾನೆ . ಇದುವರೆಗೆ ನಾನೂ ಆನೆ ಯಂತೆ ಗುದ್ದಾಡಿದೆ. ಇಷ್ಟಲಿಂಗ ಎಂದರೆ ಪರಮಾತ್ಮ ನೀನು ಎಲ್ಲಿಂದಲೊ ಬರುವೆ ಎಂದು ಭ್ರಮೆಯಲ್ಲಿದ್ದೆ.

ಈಭ್ರಮೆಯನ್ನು ಹಿರಿಯರು ತಲೆಯಲ್ಲಿ ತುಂಬಿದ್ದರು. ನೀನೆನ್ನ ಕರಸ್ಥಲದಲ್ಲಿ ಸಿಕ್ಕಿದೆಯಾಗಿ ನೀನಾನೆಂಬ ಭ್ರಾಂತೇಕೆ? ನಾನು ನೀನು ಬೇರೆ ಯಲ್ಲ. ನಾನು ನೀನು ಎಂಬುದಕ್ಕೆ ಅವಕಾಶವೇ ಇಲ್ಲ. ನಾನು ಆನೆಯಲ್ಲ. ಆನೆಯ ಮತಿಯೂ ಇಲ್ಲ. ನೀಬೇರೆ ನಾ ಬೇರೆ ಎಂಬ ಭಿನ್ನತೆ ಇಲ್ಲ ಎಂಬುದನ್ನು ನಾನು ತಿಳಿದೆ. ನೀನೆನ್ನ ಕರಸ್ಥಲದಲ್ಲಿ ಸಿಕ್ಕಿದೆಯಾಗಿ, ನೀನು ನನ್ನ ಕರಸ್ಥಲದಲ್ಲಿ ಪೂಜೆಗೊಳ್ಳುತ್ತಿರುವೆ. ಆ ಇಷ್ಟಲಿಂಗ ಬೇರೇನೂ ಅಲ್ಲ ನಾನೆ . ಆ ದರ್ಪಣದಲ್ಲಿ ಕಾಣುವುದು ನನ್ನಬಿಂಬ. ನಾಬೇರೆ ಅಲ್ಲ ನೀ ಬೇರೆ ಅಲ್ಲ.

ಅಕ್ಕಮಹಾದೇವಿಯವರು  ಸಾಧಿಸಿಕೊಂಡಿದ್ದಾರೆ. ಲೋಕದಲ್ಲಿ ಶರಣ ಪಥಕ್ಕೆ ಬಂದವರು ಕೂಡ ದೇವರನ್ನು ಹೊರಗೆ ಅರಸುತ್ತಾರೆ. ತನ್ನ ಬಿಟ್ಟು ದೇವರಿದ್ದಾನೆಂದೆ ಭಾವಿಸುತ್ತಾರೆ. ಈ ಭಾವ ಇದುವರೆಗೆ ಅಕ್ಕಮಹಾದೇವಿಯವರಿಗೆ ಇತ್ತು ಈಗ ಆ ಗಡಿದಾಟಿದ್ದಾರೆ.

3)ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನವ ಕೊಳ್ಳಿರವ್ವಾ,
ಎಮ್ಮ ನಲ್ಲನ ಮೈಯ್ಯ ಹತ್ತುವ ಅರಿಸಿನವ ಕೊಳ್ಳಿರವ್ವಾ  ಒಳಗುಂದದರಿಸಿನವ ಮಿಂದು ಚೆನ್ನಮಲ್ಲಿಕಾರ್ಜುನನ ಅಪ್ಪಿರವ್ವ.

## ಪದಗಳ ಅರ್ಥ

ಕರಿಸಿನ-ಮಂಗಲದ್ರವ್ಯ.
ಚಿನ್ನ- ಪತಿ ಪತ್ನಿಗೆ ಪತ್ನಿಸೂಚಕವಾಗಿ ಕಟ್ಟುವ ಅಟ್ಟಿಕೆ .

## ವಚನದ ಅರ್ಥ

ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನವ ಕೊಳ್ಳಿರವ್ವ. ಶುಭಸೂಚಕವಾಗಿ ಕೊರಳಿನ ಅಟ್ಟಿಕೆಗೆ ಅರಿಸಿನ ಹಚ್ಚುತ್ತಾರೆ. ಇದು ಮಾಂಗಲ್ಯದ ಸೂಚಕ. ಮನೆಗೆ ಗೃಹಿಣಿಯರು ಬಂದಾಗ ಸುಮಂಗಲಿಯಾಗು ಎಂದು ಹಾರೈಸುವ ರೂಢಿ. ಅರಿಸಿನ ಕೊಡುವ ಪದ್ದತಿ. ಎನ್ನ ನಲ್ಲನ ಮೈಯ ಹತ್ತುವ ಅರಿಸಿನವ ಕೊಳ್ಳಿರವ್ವ. ಮದುವೆಯ ಸಂದರ್ಭದಲ್ಲಿ ವಧು-ವರರಿಗೆ ಅರಿಸಿನ ನೀರು ಹಾಕುತ್ತಾರೆ. ಆಗ ಅರಿಸಿನವನ್ನು ಮುತ್ತೈದೆಯರು ವಧು- ವರರಿಗೆ ಹಚ್ಚುತ್ತಾರೆ. ಆ ಅರಿಸಿನ ವನ್ನು ತಾವು ಕೊರಳಿನ ಅಟ್ಟಿಕೆಗೂ ಧರಿಸಿ ಕೊಳ್ಳುತ್ತಾರೆ. ಅದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಆರಿಸಿನ ಮುಖ್ಯ ವಾಗಿ ಚರ್ಮರೋಗಕ್ಕೆ ದಿವ್ಯ ಔಷಧ. ಅದು ಮದುವೆಯ ಆಚರಣೆಯ ರೂಪದಲ್ಲಿ ರೂಢಿಯಲ್ಲಿದೆ. ಒಳಗುಂದದ ಆರಿಸಿನವ ಮಿಂದು ಚೆನ್ನಮಲ್ಲಿಕಾರ್ಜುನನ ಅಪ್ಪಿರವ್ವ . ಇದು ಅಳಿಸಿ ಹೋಗದ ಅರಿಸಿನ ಇದನ್ನು ನೀವು ಪೂಸಿಕೊಳ್ಳಿರಿ. ಚೆನ್ನ ಮಲ್ಲಿಕಾರ್ಜುನನ ಅನುಗ್ರಹ ನೀವೂ ಸಂಪಾದಿಸಿರಿ. ಸಖಿಯರಿಗೆ ಗೃಹಿಣಿಯರಿಗೆ ಹೇಳಿದ್ದಾರೆ.

ಗೃಹಿಣಿಯರು ಮನೆಗೆ ಬಂದಾಗ ಅವರಿಗೆ ಅರಿಸಿನಕುಂಕುಮ ಕೊಡುವುದು ರೂಢಿ. ಅರಿಸಿನ ಕುಂಕುಮವನ್ನು ಗೃಹಿಣಿಯರು ಕೊರಳಿನ ಅಟ್ಟಿಕೆಗೆ ಧರಿಸಿ ಕೊಳ್ಳುತ್ತಾರೆ. ಮನೆಗೆಗೃಹಿಣಿಯರು ಬಂದಾಗ, ಮದುವೆ, ಹಬ್ಬದ ಸಮಾರಂಭಗಳಲ್ಲಿ ಅರಿಸಿನ ಕೊಡುವ ಉದ್ದೇಶವೇನಿರಬಹುದು?ಆ ಕಾಲಕ್ಕೆ

ಗೃಹಿಣಿ ಪುರುಷನನ್ನು ಅವಲಂಬಿಸಿದ್ದಳು. ಆರ್ಥಿಕಸ್ವಾತಂತ್ರ್ಯವಿಲ್ಲದ ಕಾಲಕ್ಕೆ ಪುರುಷನಿಗೆ ದುಡಿಮೆ,ಹಣ ಕಾರಣವಾಗಿ ವಿಶೇಷ ಗೌರವಗಳು ದೊರೆತವು. ಪುರುಷನನ್ನು ಅವಲಂಬಿಸಿದ ಮಹಿ ಳೆಯರು ಪುರುಷನಿಗೆ ಶ್ರೇಯಸ್ಸು ಬಯಸುವುದು ಒಂದು ಸಾಮಾಜಿಕವಾದ ರೂಢಿಯಾಗಿ ಬೆಳೆದು ಬಂತು. ಗೃಹಿಣಿಯ ಎಲ್ಲ ಸುಖಗಳು ಪುರುಷನ ಉತ್ಪಾದನೆ,ರಕ್ಷಣೆ ಅವಲಂವಿಸಿವೆ. ಅಂತಹ ಪುರುಷನು ಧೀರನೂ, ಆರೋಗ್ಯವಂತನೂ, ದೀರ್ಘಾಯುಷಿಯೂ ಆಗಿರಬೇಕು. ಎನ್ನುವ ಹಾರೈಕೆ ಈ ರೂಢಿಯಲ್ಲಿ ಬಳಕೆ ಯಲ್ಲಿದೆ. ಅಲ್ಲದೆ ಅರಿಸಿನ ರೋಗ ನಿರೋಧಕ ಔಷಧೀಯ ಗುಣ ಹೊಂದಿರುವುದರಿಂದ ಅದರ ಬಳಕೆಯು ಈ ಸಂಪ್ರದಾಯದ ರೂಪದಲ್ಲೂ ರೂಢಿಗೆ ಬಂದಿದೆ.

4)ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಎರಗಿ ಬಂದಾಡುವ ತುಂಬಗಳಿರಾ ನೀವು ಕಾಣಿರೇ ಕಾಣಿರೇ ಕೊಳನ
ತಡಿಯಲಾಡುವ ಹಂಸೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಗಿರಿಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೇ ನೀವು ಕಾಣಿರೇ
ಚೆನ್ನ ಮಲ್ಲಿಕಾರ್ಜುನದೇವನೆಲ್ಲಿದ್ದಾನೆಂದು ಬಲ್ಲಡೆ ನೀವು ಹೇಳಿರೇ ನೀವು ಹೇಳಿರೇ.

ವಚನದ ಅರ್ಥ

ಈ ವಚನದಲ್ಲಿಯೂ ಪರಮಾತ್ಮನಿಗಾಗಿ ಹುಡುಕಾಟ ಉತ್ಕಟವಾಗಿ ಮುಂದುವರಿದಿದೆ.ಗಿಳಿ,ಕೋಗಿಲೆ, ದುಂಬಿ,ಹಂಸ, ನವಿಲುಗಳನ್ನು ಮಾತನಾಡಿಸುತ್ತಿ ದ್ದಾರೆ.(ಪ್ರಕೃತಿಯ ಸುಂದರ ಸಾನ್ನಿಧ್ಯ ಶ್ರೀ ಶೈಲ ಇಲ್ಲಿ ತಪಸ್ಸು ನಡೆಸಿರುವ) ಅಕ್ಕಮಹಾದೇವಿಯವರು ಪ್ರಕೃತಿಯಲ್ಲಿ ಆನಂದಿಸುತ್ತಿರುವ ಗಿಳಿ,ಕೋಗಿಲೆ,ತುಂಬಿ, ಹಂಸ,ನವಿಲುಗಳನ್ನು ನೋಡಿದ್ದಾರೆ. ಅವುಗಳ ಉತ್ಸಾಹ, ಆನಂದ ಜೀವನಪ್ರೀತಿ ಅಕ್ಕಮಹಾದೇವಿಯವರಲ್ಲಿ ಕುತೂಹಲ,ಬೆರಗು ಹುಟ್ಟಿಸಿವೆ. ಇಷ್ಟೊಂದು ಚೆಲುವು ,ಆನಂದದಿಂದಿರುವ, ಸುಂದರ ಜೀವನ ನಡೆಸುತ್ತಿರುವ ಇವುಗಳ ಜೀವನ ಪ್ರೀತಿಯ ಗುಟ್ಟೇನು? ಇದಕ್ಕೆಲ್ಲ ಕಾರಣವೇನು? ಚೆನ್ನಮಲ್ಲಿಕಾರ್ಜುನನ ಅನುಗ್ರಹ ಪಡೆದಿರಬೇಕು. ಅಂದಮೇಲೆ ಚೆನ್ನಮಲ್ಲಿಕಾರ್ಜುನ ಇವುಗಳಿಗೆ ಗೊತ್ತು. ಇವುಗಳನ್ನು ಕೇಳಿದರೆ ಚೆನ್ನಮಲ್ಲಿಕಾರ್ಜುನನನ್ನು ಕಾಣುವ ದೃಷ್ಟಿ ನನಗೆ ತಿಳಿಸಿಕೊಡಬಹುದು. ಅದಕ್ಕೆಂದೆ ಗಿಳಿವಿಂಡುಗಳನ್ನು ಮಾತನಾಡಿಸುತ್ತಿದ್ದಾರೆ. ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ. ಆ ಶ್ರೀ ಶೈಲ ಕಾಡಾರಣ್ಯದಲ್ಲಿ ಅಲ್ಲಲ್ಲಿ ಫಸಲು ಚಿಗುರು, ಹೂವು ತಳಿತ ಗಿಡ,ಮರ, ಬಳ್ಳಿಯಮೇಲೆ ಕುಳಿತಿರುವ. ಆ ಗಿಳಿಗಳನ್ನು ಕೇಳಿದ್ದಾರೆ. ಈ ಗಿಳಿಗಳ ಉಲಿಗೆ ಮನಸೋಲದವರಾರು? ಅವುಗಳ ಉಲಿಯಲ್ಲಿ ಅದೇನು ಉತ್ಸಾಹ, ಸಡಗರಗಳು. ಅದೆಷ್ಟು ಚೆಂದ ಮಾತಾಡುತ್ತವೆ. ಇಷ್ಟೊಂದು ಉತ್ಸಾಹದ ಮಾತುಗಳನ್ನಾಡುವ ಈ ಗಿಳಿಗಳಿಗೆ ಈ ಉತ್ಸಾಹ,

ಭಾವ ಎಲ್ಲವೂ ಹಿಡಿಸಿದವು. ಪರಮಾತ್ಮನ ಈ ಸೃಷ್ಟಿ ಎಷ್ಟು ಅದ್ಭುತ. ಅಮೋಘ! ಸರವರದೊಳಗಾಡುವ ಹಂಸೆಗಳಿರಾ ನೀವು ಕಾಣಿರೇ ನೀವು ಕಾಣಿರೇ. ಹಂಸಗಳನ್ನು ಮಾತನಾಡಿಸಿದ್ದಾರೆ. ಚೆಂದ ಆಡುತ್ತಿರುವ ಹಂಸೆಗಳಿರಾ ನೀವು ಏನಾದರೂ ನನ್ನ ಚೆನ್ನಮಲ್ಲಿಕಾರ್ಜುನನನ್ನು ಕಂಡಿರಾ. ಕಂಡಿರಾ. ಅಕ್ಕ ಕೇಳಿದ್ದಾರೆ. ಆ ಹಂಸಗಳು ಆಡುತ್ತಿಲ್ಲ ಆಹಾರ ಹುಡುಕುತ್ತಿವೆ. ಇವು ಏನು ಆಟ ಆಡುತ್ತಿರಬಹುದೆಂದು ಹತ್ತಿರ ಹೋಗಿ ಗಮನಿಸಿದರು. ಅವು ಜಲಚರಗಳನ್ನು ಹುಡುಕಿ ಹುಡುಕಿ ನುಂಗತೊಡಗಿವೆ. ಹಸಿವೆಗೆ ಊಟದಲ್ಲಿ ನಿರತವಾಗಿವೆ. ಈ ಕೊಳದಲ್ಲಿ ಅದೆಷ್ಟು ಚೆಂದ ಈಜಿ ಕೊಂಡು ಹೋಗುತ್ತಿವೆಯಲ್ಲ. ಅವು ಮುಂದೆ ಮುಂದೆ ಹೋಗುತ್ತಿದ್ದರೆ ಹಿಂದೆ ನೀರು ದಾರಿಬಿಟ್ಟು ಅಲೆ ಅತ್ತ ಇತ್ತ ಏಳುವ ಪರಿಯನ್ನು ನೋಡಿದರು. ಎಷ್ಟೆಲ್ಲ ಜಗತಿನ್ನಲಿ ನೋಡುವ ನೋಟವಿದೆ. ಧನ್ಯ. ಇವೆಲ್ಲ ನೋಟಗಳು ಸಿಕ್ಕವು. ಇನ್ನೂ ಚೆನ್ನಮಲ್ಲಿಕಾರ್ಜುನ ಸಿಗಲಿಲ್ಲ. ಕೊಳದ ಹಿಂದೆ ವಿಸ್ತಾರ ಚಾಚಿದ ಗುಡ್ಡ ಬೆಟ್ಟ. ಅಲ್ಲಿ ನವಿಲುಗಳು ಹಿಂಡುಗಟ್ಟಿ ಆಡುತ್ತಿವೆ.ಗರಿ ಬಿಚ್ಚಿ ಕುಣಿಯುವ ನವಿಲಿನ ಪರಿಯನ್ನು ನೋಡಿದರು. ಆ ನವಿಲಿನ ಗರಿಯ ಬಣ್ಣ. ವೈವಿಧ್ಯಚೆಲವು ಕಣ್ಮನ ಸೆಳೆದವು.
ಗಿರಿಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೇ ನೀವು ಕಾಣಿರೇ, ದುಂಬಿಯನ್ನು ಮಾತನಾಡಿಸಿದರು. ಹಂಸವನ್ನು ಮಾತನಾಡಿಸಿದರು. ಈಗ ನವಿಲನ್ನು ಮಾತ ನಾಡಿಸುತ್ತಿದ್ದಾರೆ. ಬೆಟ್ಟ, ಗುಡ್ಡ, ಕಂದರ ದೊಳಗೆ ಗರಿಬಿಚ್ಚಿ ಆಡುವ ಚೆಂದ ನವಿಲುಗಳೆ ನೀವೇನಾದರೂ ನನ್ನ ಚೆನ್ನಮಲ್ಲಿಕಾರ್ಜುನನನ್ನು ಕಂಡಿರಾ. ಅದೆಷ್ಟು ಪರಿಯಲ್ಲಿ ಹುಡುಕಾಟ ನಡೆಸಿದ್ದಾರಲ್ಲ. ನಾವೂ ಹುಡುಕಾಟ ಮಾಡುತ್ತೇವೆ. ಕಳೆದುಕೊಂಡ ಆಕಳುಗಳು,ಎಮ್ಮೆ, ಕುರಿ, ವಸ್ತು, ಆಡುಗಳಿಗಾಗಿಯೋ ? ಅಥವಾ ಮನೆಯ ಮಂದಿ ಕಾಣ ದಾದಾಗ ನಮ್ಮವರಿಗಾಗಿ ನಮ್ಮ ಆಸ್ತಿಗಾಗಿ ಹುಡುಕಾಡುತ್ತೇವೆ. ದೇವರಿಗಾಗಿ ನಾವು ಎಂದೂ ಹುಡುಕಾಟ ಮಾಡುವುದಿಲ್ಲ. ಮಹಾದೇವಿಯವರು ಹುಡುಕಾಟ ಅದೆಷ್ಟು ವಿಸ್ತಾರ ವುಳ್ಳದ್ದು ನೋಡಿರಿ. ಅವರಿಗೆ ಬೇರೇನೂ ಬೇಡ. ಪರಮಾತ್ಮಬೇಕು. ಎನ್ನ ಒಡೆಯ, ಚೆನ್ನಮಲ್ಲಿಕಾರ್ಜುನದೇವ ಎಲ್ಲಿದ್ದಾನೆಂದು ಬಲ್ಲಡೆ ನೀವು ಹೇಳಿರೇ ನೀವು ಹೇಳಿರೇ. ಕೊನೆಯದಾಗಿ ಅವರು ಕೇಳಿದಮಾತು ಕೂಡ ಚೆನ್ನಮಲ್ಲಿಕಾರ್ಜುನನ ವಿಚಾರವೆ. ಎನ್ನ ಒಡೆಯ . ಪರಮಾತ್ಮನು ಅಕ್ಕಮಹಾದೇವಿಯವರು, ಒಡೆಯರು.ಪತಿ. ಗಂಡ. ಯಜಮಾನ. ಜನಪದ ಸಾಹಿತ್ಯದಲ್ಲಿ ಎಲ್ಲೋ ಜೋಗಪ್ಪ ನಿನ್ನರಮನೆ . ಎಂದು ಒಬ್ಬ ಹೆಣ್ಣುಮಗಳು ಅವನನ್ನು ಕೇಳುತ್ತಾಳೆ. ಈಕೆ ಗೃಹಿಣಿ ಗಂಡ, ಮಗು ಬಂಧು ಎಲ್ಲವನ್ನು ತೊರೆದು ಜೋಗಿಯ ಹಿಂದೆ ಬಂದಿದ್ದಾಳೆ. ಆತ ದೊಡ್ಡ ಅರಮನೆಯಲ್ಲಿರಬೇಕು ಎಂದು ಈಕೆ ತಿಳಿದಿದ್ದಾಳೆ. ಸತ್ಯ ಏನೆಂದರೆ ಅರಮನೆ ಇರಲಿ ಒಂದು ಗುಡಿಸಲು,ನೆಲೆ ಕೂಡ ಅವನಿಗೆ ಇಲ್ಲ. ! ಎಂತಹ ದುರಂತ ಚೆನ್ನಮಲ್ಲಿಕಾರ್ಜುನ ಪರಮಾತ್ಮ ಸಿಕ್ಕೇ ಬಿಡು ತಾನೆಂದು ತಂದೆ,ತಾಯಿ, ಊರು ಕೇರಿ, ಲಗ್ನವಾಗಲು ಬಂದ ರಾಜ, ಅರಮನೆ ಎಲ್ಲ ಬಿಟ್ಟು ಪರಮಾತ್ಮ ಎಂದು ಬಂದರು .ಅವನಿಗಾಗಿ ಹುಡುಕಾಟ ನಡೆಸಿದರು. ಅದರೆ ಪರಮಾತ್ಮ ಗಂಡನಾಗಿ ಸಿಗುವುದಿರಲಿ ಆ ಸತ್ಯವೇ ಬೇರೆ. ಹುಡುಕಾಟ ನಡೆಸಿ ನಡೆಸಿ ಒಮ್ಮೆಲೆ ಸತ್ಯದರ್ಶನವಾದಾಗ ಅಕ್ಕಮಹಾದೇವಿಯವರಿಗಾದ ವಿಷಾದ, ಆಘಾತ, ಯಾವ ಶಬ್ದದಲ್ಲಿ ಹೇಳಲು ಸಾಧ್ಯ? ಈ ಪ್ರಕೃತಿ ಒಮ್ಮೆಲೆ ಅವರಲ್ಲಿ ಏನೆಲ್ಲ ಭಾವಗಳನ್ನು ಸೃಷ್ಟಿಸಿರಬೇಕು. ದಿವ್ಯ ಮೌನದಲ್ಲಿ ಮಹಾದೇವಿಯವರು ಶಾಂತಿ ಸಮಾಧಾನ ತಂದುಕೊಂಡಿದ್ದಾರೆ.

ಹೌದು ನಾನು ತಪಸ್ಸಿಗೆ ಬಂದುದು ಸಾರ್ಥಕವಾಯಿತು. ನನ್ನ ಚೆನ್ನಮಲ್ಲಿಕಾರ್ಜುನನ ಚೆಲುವಿನ ಸೃಷ್ಟಿವೈವಿಧ್ಯವನ್ನೆಲ್ಲ ಕಂಡೆ. ಬಾಳು ಧನ್ಯ. ನನ್ನ ಚೆನ್ನಮಲ್ಲಿಕಾರ್ಜುನನು ನಾನು ತಿಳಿದಂತೆ ಮಾನುಷ್ಯರೂಪದಲ್ಲಿ ನನಗೆ ಸಿಗುವುದಿಲ್ಲ. ಚಿಲಿಮಿಲಿ. ಆಡುವ ಗಿಳಿಯ ಸೃಷ್ಟಿ ಅವನದು. ಹಾಡುವ ಕೋಗಿಲೆಯ ಸಿರಿಕಂಠ ಅವನ ಸೃಷ್ಟಿ ಆಡುವ ದುಂಬಿ,ಹಂಸ, ಕುಣಿವ ನವಿಲು ಎಲ್ಲವೂ ಅವನ ಸೃಷ್ಟಿಯೆ. ಹೂವಾಗಿ ಅರಳಿದ್ದಾನೆ. ನವಿಲಾಗಿ ಕುಣಿದಿದ್ದಾನೆ. ಕೋಗಿಲೆಯಾಗಿ ಸ್ವರವೆತ್ತಿ ಹಾಡಿದ್ದಾನೆ. ಈ ವೈವಿಧ್ಯವನ್ನು ನೋಡು ಆನಂದಿಸು. ಇದಕ್ಕಿಂತ ನಿನಗೆ ಬೇರೇನು ಬೇಕು. ಪರಮಾತ್ಮನು ಕಾಣುವ ಎಲ್ಲದಕ್ಕು ಅವನೆ ಮೂಲಾಧಾರನಾಗಿದ್ದಾನೆ. ಕೋಟಿ ನಾಮರೂಪಗಳಲ್ಲಿ ಹೊಳಹು ತೋರಿದ್ದಾನೆ. ಎಲ್ಲವೂ ಅವನೆ. ಎಲ್ಲವೂ ಆತನ ಲೀಲಾಜಗತ್ತು. ವರ್ಣವಾಗಿ, ದನಿಯಾಗಿ ರೂಪಾಗಿ, ಚೆಲುವಾಗಿ ಏನೆಲ್ಲ ಆಗಿ ತೋರಿದವನು ಚೆನ್ನಮಲ್ಲಿಕಾರ್ಜುನನೆ. ಇನ್ನು ಎಲ್ಲಿದ್ದಾನೆಂದು ಹುಡುಕಿದ್ದು ಮುಗಿ ಯಿತು. ವರ್ತಮಾನವನ್ನು ಬದುಕುವುದನ್ನು ಆನಂದಮಯ ಮಾಡಿಕೊಂಡು ಆನಂದದಲ್ಲಿ ದಿನ ಕಳೆ ಸಮಾಧಾನ ಹೊಂದಿದ್ದಾರೆ.

5) ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ
ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ,
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ
ಮದುವೆಯಾದನು. ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ .
ಚೆನ್ನಮಲ್ಲಿಕಾರ್ಜುನಂಗೆನ್ನ ಮದುವೆಯ ಮಾಡಿದರು.

### ಪದಗಳ ಅರ್ಥ

ಜಲದ ಮಂಟಪ- ನೀರಿನ ಮಂಟಪ,
ಉರಿಯ ಚಪ್ಪರ- ಅಗ್ನಿಯ ಮೇಲು ಹೊದಿಕೆ,
ಕಾಲಿಲ್ಲದ ಹೆಂಡತಿ- ಲೌಕಿಕ ವಾಸನೆಯಿಲ್ಲದ ಸತಿ, ಅನುಭಾವಿ ಶರಣೆ,
ತಲೆಯಿಲ್ಲದ ಗಂಡ-ಸಾಕಾರ ಸುಳುಹಿಲ್ಲದ ನಿರಾಕಾರ ಪರಮಾತ್ಮ,
ಎಂದೆಂದೂ ಬಿಡದ ಬಾಳುವೆ-ಅನುಭಾವ ಮಾರ್ಗ, ಮುಕ್ತಿಪಥ.
ಮದುವೆ-ದೀಕ್ಷೆ.

### ವಚನದ ಅರ್ಥ

ಜಲದಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ ಆಲಿಕಲ್ಲ ಹಸೆಯಹಾಸಿ ಬಾಸಿಗವ ಕಟ್ಟಿ ನೀರಿನ ಮಂಟಪ ಅಗ್ನಿಯ ಚಪ್ಪರ. ವಧುವರರು ಕೂಡಲು ಆಲ್ಲಿಕಲ್ಲ ಹಸಮಣೆ : ಬಾಸಿಗವನ್ನು ಕಟ್ಟಿದರುಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು. ವಧುಗೆ ಕಾಲಿಲ್ಲ. ವರನಿಗೆ ತಲೆಯಿಲ್ಲ. ಒಳ್ಳೆಯ ಜೋಡಿ. ಮದುವೆ ನಡೆದುಹೋಯಿತ್ತು ಎಂದೆಂದೂ ಬಿಡದ ಬಾಳುವೆಗೆ ಕೊಟ್ಟ ನನ್ನ ಚೆನ್ನಮಲ್ಲಿಕಾರ್ಜುನಂಗೆ ಮದುವೆಯ ಮಾಡಿದರು. ಚೆನ್ನಮಲ್ಲಿಕಾರ್ಜುನನ ಜೊತೆ ಮದುವೆ ನಡೆಯಿತು. ನನ್ನ ಬಾಳುವೆ ಶಾಶ್ವತವಾದುದು. ನನ್ನ-ವರನ ವಿವಾಹ ಚಿರವಾದುದು. ಈ

ವಚನದಲ್ಲಿ ಲಗ್ನದ ಇತರ ಅರ್ಥಗಳನ್ನು ಇಲ್ಲಿ ವಿವರಿಸಿದ್ದಾರೆ. ಲಗ್ನ- 'ನಡೆದ ಚಿತ್ರಣವನ್ನು ಈವಚನವೂ ಕಟ್ಟಿ ಕೊಡುತ್ತದೆ.. ಅಲೌಕಿಕ ಪತಿಯನ್ನು ಪಡೆಯುವ ಹಂಬಲದಲ್ಲಿದ್ದ ಮಹಾದೇವಿಯವರು ಆ ಅಲೌಕಿಕ ಮದುವೆಯನ್ನೂ ಇಲ್ಲಿ ಚಿತ್ರಿಸಿದ್ದಾರೆ ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ ನೀರಿನ ಮಂಟಪ ಅದರ 'ಮೇಲೆ ಅಗ್ನಿಯ ಚಪ್ಪರ ಇದು ಸಾಧ್ಯವೆ? ಸಾಧ್ಯವೆಂದು ತೋರಿಸಿಕೊಟ್ಟಿದ್ದಾರೆ. ನೀರು ಅಗ್ನಿಯ ಕಾವ್ಯಗಳೇನು? ನೀರು ಶುದ್ಧಮಾಡುತ್ತದೆ. ಅಗ್ನಿ ಸುಟ್ಟು ಹಾಕುತ್ತದೆ. ನೀರು ಶರೀರವನ್ನು ನಿರ್ಮಲ ಮಾಡುತ್ತದೆ. ಅಗ್ನಿಯು ನೀರಿಗೆ ಸಿಗಲಾರದ ಇಂದ್ರಿಯ ಶುದ್ದಿ ಸಂಕೇತಿಸುತ್ತದೆ. ಸ್ಥೂಲ ಶರೀರವು ನೀರಿಗೆ ಸಿಗುತ್ತದೆ. ಆದರೆ ಅಂತಃಕರಣಗಳಾದ ಮನ ಚಿತ್ತ ಬುದ್ದಿ ಅಹಂಕಾರಗಳ ಶುದ್ದೀಕರಣಗಳ ಕೆಲಸ ಅಗ್ನಿಯಚಪ್ಪರ ಮಾಡುತ್ತದೆ. ಒಂದು ನಿರ್ಮಲ ಕೆಲಸ ಮಾಡಿದರೆ, ಇನ್ನೊಂದು ಸುಟ್ಟು ಶುದ್ದ ಮಾಡುವ ಕೆಲಸ ಮಾಡುತ್ತದೆ. ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ, ಆಲಿ ಕಲ್ಲು ನೀರಿನಿಂದ ಆದದ್ದು. ಆಲಿಕಲ್ಲು ಪಾರದರ್ಶಕ ಸ್ಪಟಿಕ ದಂತೆ ಶುದ್ದ. ಒಳಗನ್ನೆಲ್ಲ ತೋರಿಕೊಳ್ಳುತ್ತದೆ. ದೇಹೇಂದ್ರಿಯಗಳು ಶುದ್ಧವಾದಮೇಲೆ ಆತ್ಮನ ದರ್ಶನ. ಈ ಆತ್ಮನೆಂಬ ಸತಿಗೆ ಪರಮಾತ್ಮನೊಂದಿಗೆ ಲಗ್ನ ನಡೆಯುತ್ತದೆ. ಆ ವಿಧಿಯ ದೀಕ್ಷೆ ದರ್ಶನ, ದೇಹ ಇಂದ್ರಿಯ ದಾಟಿ ಆತ್ಮನ ದರ್ಶನವಾದಮೇಲೆ, ಕಾಲುಗಳಿಗೆ ಲೌಕಿಕ ನಡೆಯಿಲ್ಲ. ಈಆತ್ಮನು ಸಂಸಾರ ವಾಸನದೂರನಾದನು. ಅಪೂರ್ಣದ ಬಾಳುವ ಹೋಯಿತು. ಪೂರ್ಣತ್ವದ ಬದುಕು ಬಂತು. ಎಂದೆಂದೂ ಬಿಡದ ಬಾಳುವೆ ಮುಕ್ತಿ ಮಾರ್ಗ.ಮುಕ್ತಿ.ಇದು ಶಾಶ್ವತ ಮದುವೆ. ಇಲ್ಲಿ ಸತ್ತುಹುಟ್ಟುವ ಜಂಜಡವಿಲ್ಲ.

6) ಜಂಗಮವೆನ್ನ ಪ್ರಾಣ. ಜಂಗಮವೆನ್ನ ಜೀವ .
ಜಂಗಮವೆನ್ನ ಪುಣ್ಯದ ಫಲ. ಜಂಗಮವನ್ನ ನಿಧಿ ನಿಧಾನ. ಜಂಗಮವೆನ್ನ
ಹರುಷದ ಮೇರೆ. ಚೆನ್ನಮಲ್ಲಿಕಾರ್ಜುನ.
ಜಂಗಮದ ತಿಂಥಿಣಿಯಲ್ಲಿ ಓಲಾಡುವೆನು.

### ವಚನದ ಅರ್ಥ

ಈ ವಚನದಲ್ಲಿ ಜಂಗಮದ ಗುಣಗಾನ ಮಾಡಲಾಗಿದೆ. ಜಂಗಮ ಎಂದರೆ ಅದು ಹುಟ್ಟಿನಿಂದ ಬಂದುದಲ್ಲ. ವೇಷಹಾಕುವುದರಿಂದಲೂ ಬರುವುದಲ್ಲ. ಅದು ವ್ಯಕ್ತಿತ್ವದಿಂದ ಬರುವಂಥದು.ಪರಮವಿರಾಗಿಗಳಾಗಿ ತ್ಯಾಗಮಾಡಿ ಸಾಕ್ಷಾತ್ಕಾರ ಮಾಡಿಕೊಂಡವರು ಮಾತ್ರ ಜಂಗಮರು. ಅವರು ಎನ್ನ ಪ್ರಾಣ,ಜೀವ ಪುಣ್ಯ, ನಿಧಿ ನಿಧಾನ,ಆನಂದದ ಸೀಮೆ . ಈ ಮಹಾತ್ಮರ ಸನ್ನಿಧಿಯಲ್ಲಿ ಹರುಷದಲ್ಲಿ ಓಲಾಡು ತೇನೆ.ಜಂಗಮರ ದರ್ಶನವಾದುದು ನನ್ನ ಭಾಗ್ಯ.ಅರಿವು, ಆಚಾರದ ನಿಧಿ ಅವರು.

7) ಜಾತಿಶೈವರು, ಅಜಾತಿಶೈವರು ಎಂದು ಎರಡು ಪ್ರಕಾರವಾಗಿಪ್ಪರಯ್ಯ.

ಜಾತಿಶೈವರೆಂಬವರು ಶಿವಂಗೆ ಭೋಗ್ಯಸ್ತ್ರೀಯರಯ್ಯ. ಅಜಾತಿಶೈವರೆಂಬವರು ಶಿವಂಗೆ ಕುಲಸ್ತ್ರೀಯರಯ್ಯ. ದ್ವಾರೆಯಸ್ಯಜ ಮಾತಂಗೋವಾಯುವೇಗ ತುರಂಗಯಃ ಪೂರ್ಣೇಂದು ವದನಾನಾರಿಶಿವಪೂಜಾವಿಧೇಫಲಂ ||
ಇವು ಜಾತಿಶೈವಂಗೆ ಕೊಟ್ಟ ಭೋಗಂಗಳಯ್ಯ. ಅಜಾತಿಶೈವರು ಗುರುಲಿಂಗಜಂಗಮಕ್ಕೆ ತನುಮನಧನವ ನಿವೇದಿಸಿ ಸರ್ವಸೂತಕರಹಿತರಾಗಿಹರಯ್ಯ.
ಅಹಂ ಮಹೇಶ್ವರ ಪ್ರಾಣಾ ಮಮಪ್ರಾಣಿಮಹೇಶ್ವರಃ ತಥೈಕಂನಿಷ್ಕ್ರಿಯಂ ಭೂಯಾದನ್ಯಲಿಂಗೈಕಮೇವಚ||
ಇದು ಕಾರಣ ಸರ್ವೇಶ್ವರ ಚೆನ್ನಮಲ್ಲಿಕಾರ್ಜುನಯ್ಯನು ಭಕ್ತಕಾಯನೆಂಬೈಕ್ಯ ಪದವನು ಅಜಾತಿಶೈವರಿಗೆ ಕೊಡುವರಯ್ಯ.

## ಪದಗಳ ಅರ್ಥ

ಜಾತಿಶೈವ-ಗುಣ ಸಂಬಂಧವಾಗಿ ಬಂದ ಹೆಸರು. ಭೋಗಾಪೇಕ್ಷೆಯ ಭಕ್ತರು. ಅಜಾತಿಶೈವರು-ನಿರಪೇಕ್ಷೆಯ ತ್ಯಾಗಿಗಳು. ಶುದ್ಧಭಕ್ತಿಮಾಡಿ ಪರಮಾತ್ಮನನ್ನು ಪಡೆ ದುಕೊಳ್ಳುವವರು.

## ವಚನದ ಅರ್ಥ

ಈವಚನದಲ್ಲಿ ಲಿಂಗಾಯತ ವೀರಶೈವರಲ್ಲಿರುವ ಎರಡು ಭೇದಗಳನ್ನು ವಿವರಿಸಿದೆ. 1. ಜಾತಿಶೈವ 2. ಅಜಾತಿಶೈವ ಜಾತಿಶೈವರು ಸಕಲಭೋಗಗಳನ್ನು ಬಯಸುವವರು, ಅಜಾತಿಶೈವರು ಗುರುಲಿಂಗಜಂಗಮದಲ್ಲಿ ಭಕ್ತಿಮಾಡಿ ಶಿವನಲ್ಲಿ ಐಕ್ಯಪದವಿ ಬಯಸುವವರು. ಜಾತಿಶೈವರನ್ನು ಶಿವನಿಗೆ ಭೋಗ್ಯ ಸ್ತ್ರೀಯರೆಂದೂ ಅಜಾತಿ ಶೈವರನ್ನು ಶಿವನ ಕುಲಸ್ತ್ರೀಯರೆಂದು ಕರೆಯಲಾಗುವುದು. ಜಾತಿಶೈವರು ಮನೆಯಬಾಗಿಲಿನಲ್ಲಿ ಆನೆ, ಕುದುರೆ, ರಥ,ಪೂರ್ಣಚಂದ್ರನಂತಿರುವ ನಾರಿಯರು ಈಫಲಗಳು ಶಿವಭಕ್ತಿಯಿಂದ ಲಭಿಸಲಿ ಎಂದು ಭಕ್ತಿಮಾಡುತ್ತಾರೆ. ಇವರು ಜಾತಿ ಶೈವರು. ಶಿವನಭೋಗ್ಯಸ್ತ್ರೀಯರು. ಇನ್ನು ಅಜಾತಿಶೈವರೆಂದರೆ ಗುರುಲಿಂಗಜಂಗ ಮಕ್ಕೆ ತನು,ಮನ,ಧನವನ್ನು ಗುರು, ಲಿಂಗಜಂಗಮಕ್ಕೆ ನೀಡಿ ಲಿಂಗಭಕ್ತಿಯಲ್ಲಿ ಪರಮಾತ್ಮನನ್ನು ಸಾಧ್ಯಮಾಡಿಕೊಂಡು ಅವನಲ್ಲಿ ಐಕ್ಯ ಹೊಂದುವರು. ಇವರು ಶಿವನಕುಲಸ್ತ್ರೀಯರು ಎಂದು ಕರೆಸಿಕೊಳ್ಳುವರು. ಇವರು ಎಲ್ಲ ಸೂತಕಗಳಿಂದ ಮುಕ್ತ ರಾಗಿರುವರು. ಈಭಕ್ತರು ಶಿವನೆ ಪ್ರಾಣವಾಗಿ ಜೀವನ ಮಾಡುವರು . ಶಿವನಿಗೂ ಈಭಕ್ತರೆ ಪ್ರಾಣವಾಗಿರುವರು. ಲೋಕದಲ್ಲಿ ಉಳಿದೆಲ್ಲ ಫಲಗಳು ಅಚಿರವಾದವುಗಳು ಇದು ಕಾಡಿನ ಬೆಳದಿಂಗಳು ಗಾಳಿಗೊಡ್ಡಿದ ದೀಪ, ನೀರಿನ ಮೇಲಿನಗುಳ್ಳೆ . ಆದುದರಿಂದ ಇಂತಹ ಅಚಿರವಾದ ಫಲಗಳು ಪರಿಣಾಮದಲ್ಲಿ ದುಃಖವನ್ನೆ ತಂದು ಕೊಡುತ್ತವೆ. ಶಿವನಿಗೆ ತನ್ನ ಭಕ್ತರ ಹೊರತು, ಭಕ್ತರಿಗೆ ಶಿವನ ಹೊರತು ಇನ್ನೊಂದು ಧ್ಯಾನವಿಲ್ಲ. ಆದುದರಿಂದ ಇವರು ಶಿವನಲ್ಲಿ ಕಾಯಸಹಿತ ಲಿಂಗೈಕ್ಯರಾಗುವರು.

8)ಜಾಲಗಾರನೊಬ್ಬ ಜಲವ ಹೊಕ್ಕು ಜಲವ ಶೋಧಿಸಿ ಹಲವು ಜೀವಿಯ ಕೊಂದು ನಲಿನಲಿದಾಡುವ.
ತನ್ನ ಮನೆಯಲೊಂದು ಶಿಶು ಸತ್ತಡೆ
ಮರುಗುವಂತೆ ಆ ಜೀವಿಗೇಕೆ ಮರುಗನು?
ಸ್ವಾತ್ಮಾನಾಂ ಇತರಂಚೇತಿ ಭಿನ್ನ ತಾನ್ಯೆವ ದೃಷ್ಯತಾಂ ಸರ್ವಂ ಚಿಜ್ಯೋತಿ ರೇವೇತಿ ಯಃ ಪಶ್ಯತಿ ಸ : ಪಶ್ವತಿ.
ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ. ಚೆನ್ನಮಲ್ಲಿಕಾರ್ಜುನಯ್ಯ ಈ ಜೀವಹಿಂಸೆ ಯ ಮಾಡುವವರನೇನೆಂಬೆನಯ್ಯ.?

## ಪದಗಳ ಅರ್ಥ

ಜಾಲಗಾರ-ಮೀನು ಹಿಡಿಯುವವ,
ಸ್ವಾತ್ಮಾನಾಂ-ತನ್ನಂತೆಯೆ,
ಇತರಂ-ಇತರರನ್ನು
ಭಿನ್ನ- ಬೇರೆಯಾದ,
ದೃಶ್ಯ-ಸ್ವರೂಪ,
ಸರ್ವ-ಎಲ್ಲವೂ
ಚಿಜ್ಯೋತಿ-ಚೈತನ್ಯಾತ್ಮಕ ವಾದ ಬೆಳಕು.
.ಪಶ್ಯತಿ-ನೋಡುವುದು.

## ವಚನದ ಅರ್ಥ

ಮೀನು ಹಿಡಿಯುವ ಜಲಗಾರರು ಮೀನಿದ್ದಲ್ಲೆಲ್ಲ ಮೀನು ಹಿಡಿಯುತ್ತಾರೆ. ಬಲೆಗೆ ಅಪಾರ ಮೀನುಗಳು ಬಿದ್ದಷ್ಟೂ ಅವನ ಸಂತೋಷ ಹೆಚ್ಚುತ್ತದೆ. ಸಾವಿರ ಸಾವಿರ ಮೀನುಗಳು ದಿನನಿತ್ಯ ಇವನಿಂದ ಸಾಯುತ್ತವೆ ಮೀನುಗಳ ಸಾವು ಇವನಿಗೆ ದು:ಖ ತರುವುದಿಲ್ಲ.ಆದರೆ ತನ್ನ ಮನೆಯಲ್ಲಿ ಮಗು ಸತ್ತಾಗ ಮಾತ್ರ ಇವನಿಗೆ ಅಪಾರ ದು:ಖ ವಾಗುತ್ತದೆ. ತನ್ನ ಮಗುವಿನ ಸಾವಿಗೆ ದು:ಖ ವ್ಯಕ್ತಮಾಡುವಂತೆ ಮೀನುಗಳ ಸಾವಿಗೆ ದುಃಖ ವ್ಯಕ್ತಮಾಡುವುದಿಲ್ಲ. ಈ ಜಾಲಗಾರನ ದುಃಖವು ಲೋಕಕ್ಕೆ ನಗೆಪಾಟಲು. ಇದಕ್ಕೆ ಒಂದು ಶೋಕ ಉದಾಹರಿಸಿದ್ದಾರೆ ಅಕ್ಕಮಹಾದೇವಿಯವರು. ತನ್ನ ಆತ್ಮದಂತೆ ಇತರ ಜೀವಿಗಳನ್ನು ಕಾಣಬೇಕು. ಭೌತದೇಹದಲ್ಲಿ ಅದು ಬೇರೆಯಾಗಿ ಕಂಡರುಎಲ್ಲವೂ ಮೂಲ ಚೈತನ್ಯಸ್ವರೂಪದ ಜ್ಯೋತಿಸ್ವರೂಪವೆ ಆಗಿರುತ್ತದೆ. ನಾವು ಶರಣರಾದವರು ಜೀವಹಿಂಸೆ ಮಾಡಬಾರದು, ಜೀವಹಿಂಸೆಯನ್ನು ಶರಣಧರ್ಮ ವಿರೋಧಿಸುತ್ತದೆ.